ವಿಷಯ:- ಮೈಸೂರಿನ ಬಡಾವಣೆಗಳಲ್ಲಿ ಟ್ರಾನ್ಸ್‌ಫಾರ್ಮರ್‌ಗಳನ್ನು ಅಳವಡಿಸುವ ಬಗ್ಗೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 674 (713)

ಶ್ರೀ ಇ.ಮಾರುತಿ ರಾವ್ ಪವಾರ್ (ನರಸಿಂಹರಾಜ):- ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೈಸೂರಿನ ಗಾಯಿತ್ರಿಪುರಂ ಕ್ಯಾತಮಾರನಹಳ್ಳಿ, ಗಣೇಶನಗರ, ರಾಜೇಂದ್ರನಗರ, ಪುಲಕೇಶಿ ರಸ್ತೆ (ಕೈಲಾಸ ಪುರಂ) ಈ ಬಡಾವಣೆಗಳಲ್ಲಿ ಹೆಚ್ಚಿನ ಶಕ್ತಿ ಟ್ರಾನ್ಸ್‌ಫಾರ್ಮರುಗಳನ್ನು ಅಳವಡಿಸಲು ಮಂಜೂರಾತಿ ದೊರಕಿದ್ದರೂ ಸಹ ಈ ಕೆಲಸ ಪೂರ್ಣಗೊಳಿಸದಿರಲು ಕಾರಣವೇನು?

ಶ್ರೀ ಶರಣ ಬಸಪ್ಪ ದರ್ಶನಪುರ್ (ಇಂಧನ ರಾಜ್ಯ ಸಚಿವರು):-

ಅ) ಮಂಡಳಿಯು ಮೈಸೂರಿನ ಗಾಯಿತ್ರಿಪುರಂ ಬಡವಾಣೆಯಲ್ಲಿ ಒಂದು 250 ಕೆ.ವಿ.ಎ. ಸಾಮರ್ಥ್ಯದ ವಿತರಣಾ ಟ್ರಾನ್ಸ್‌ಫಾರ್ಮರನ್ನು ಸ್ಥಾಪಿಸುವ ಅಂದಾಜು ಪಟ್ಟಿಗೆ ಇನ್ನು ಮಂಜೂರಾತಿ ನೀಡಬೇಕಾಗಿದೆ. ಕ್ಯಾತಮಾರನಹಳ್ಳಿ ಬಡಾವಣೆಯಲ್ಲಿ ಒಂದು 250 ಕೆ.ವಿ.ಎ. ಸಾಮರ್ಥ್ಯದ ವಿತರಣಾ ಟ್ರಾನ್ಸ್‌ಫಾರ್ಮರನ್ನು ಸ್ಥಾಪಿಸುವ ಅಂದಾಜು ಪಟ್ಟಿಗೆ ಮಂಜೂರಾತಿ ನೀಡಲಾಗಿದೆ. ಈ ಕೆಲಸವನ್ನು ಶೀಘ್ರದಲ್ಲಿ ತೆಗೆದುಕೊಳ್ಳಲಾಗುವುದು.

ಗಣೇಶ ನಗರದ ಎ ಮತ್ತು ಬಿ ಬ್ಲಾಕ್‌ಗಳಲ್ಲಿ ಒಂದು 250 ಕೆ.ವಿ.ಎ. ವಿತರಣಾ ಟ್ರಾನ್ಸ್ ಫಾರ್ಮರನ್ನು ಸ್ಥಾಪಿಸುವ ಅಂದಾಜು ಪಟ್ಟಿಗೆ ಮಂಜೂರಾತಿ ನೀಡಲಾಗಿದೆ. ಮತ್ತು ಗಣೇಶ ನಗರದ ಸಿ ಮತ್ತು ಡಿ ಬ್ಲಾಕ್‌ಗಳಲ್ಲಿ ಒಂದು 100 ಕೆ.ವಿ.ಎ ವಿದ್ಯುತ್ ವಿತರಣಾ ಟ್ರಾನ್ಸ್‌ಫಾರ್ಮರನ್ನು ಸ್ಥಾಪಿಸುವ ಅಂದಾಜು ಪಟ್ಟಿಗೂ ಸಹ ಮಂಚೂರಾತಿ ನೀಡಲಾಗಿದೆ. ಈ ಕೆಲಸಗಳನ್ನು ಆದಷ್ಟು ಜಾಗ್ರತೆ ಕೈಗೊಳ್ಳಲಾಗುವುದು.

ಈ ಹಿಂದೆ ರಾಜೇಂದ್ರನಗರ ಬಡಾವಣೆಯಲ್ಲಿ ಒಂದು 100 ಕೆ.ವಿ.ಎ. ಸಾಮರ್ಥ್ಯದ ವಿತರಣಾ ಟ್ರಾನ್ಸ್‌ಫಾರ್ಮರನ್ನು ಸ್ಥಾಪಿಸಲು ಉದ್ದೇಶಿಸಲಾಗಿತ್ತು. ಈಗ್ಗೆ 3-4 ತಿಂಗಳ ಹಿಂದೆ ಈ ಬಡಾವಣೆಯಲ್ಲಿದ್ದ ಸ್ಕಿಂ ಎಲ್.ಎ.ಸಿ.ಆರ್. ಕಂಡಕ್ಟರ್‌ರನ್ನು ಹೆಚ್ಚಿನ ಗಾತ್ರದ ರಾಬಿಟ್ ಕಂಡಕ್ಟರ್ ಮೂಲಕ ಬದಲಾಯಿಸುವ (ರೀ ಕಂಡಕ್ಟರಿಂಗ್) ಕಾರ್ಯವನ್ನು ನಿರ್ವಹಿಸಲಾಗಿದೆ. ಆದ್ದರಿಂದ ಈಗ ಕಡಿಮೆ ವೋಲ್ಟೇಜ್ ಸಮಸ್ಯೆಯಿರುವುದಿಲ್ಲ. ಇದರಿಂದಾಗಿ ಈ ಬಡಾವಣೆಯಲ್ಲಿ 100 ಕೆ.ವಿ.ಎ. ಟ್ರಾನ್ಸ್ ಫಾರ್ಮರ್‌ರನ್ನು ಹೆಚ್ಚುವರಿಯಾಗಿ ಸ್ಥಾಪಿಸಲು ಮಾಡಿದ್ದ ಪ್ರಸ್ತಾವನೆಯನ್ನು ಸದ್ಯಕ್ಕೆ ಕೈಬಿಡಲಾಗಿದೆ.

ಪುಲಕೇಶಿ ರಸ್ತೆ (ಕೈಲಾಸಪುರಂ) ಬಡಾವಣೆಯಲ್ಲಿ ಹೆಚ್ಚುವರಿ ವಿತರಣಾ ಟ್ರಾನ್ಸ್‌ಫಾರ್ಮರ್‌ಗಳನ್ನು ಸ್ಥಾಪಿಸುವ ಪ್ರಸ್ತಾವನೆ ಸದ್ಯಕ್ಕೆ ಇರುವುದಿಲ್ಲ.

ವಿಷಯ:- ರಾಣೇಬೆನ್ನೂರು ತಾಲ್ಲೋಕು ತುಮ್ಮಿನಕಟ್ಟೆ ಸಬ್‌ಸ್ಟೇಷನ್ ಕೆಲಸ ಸ್ಥಗಿತ.